

# ನೀರೊಳಗಿದ್ದೂಂ ಸಚಿವ ಸಭೆ!



ಸಂಪುಟ ಸಭೆಯಲ್ಲಿ ಅಧ್ಯಕ್ಷರು.

■ **ವಿಷ್ಣು ಭಾರದ್ವಾಜ್**

ಸಿರಿವಂತರ ಸುಖವಾಸ ಕೇಂದ್ರ ಮಾಲ್ದೀವ್ಸ್ ಹೊಸ ಸುದ್ದಿ ಮಾಡಿದೆ. ಕಳೆದ ಶನಿವಾರ ಅಲ್ಲಿನ ಸರ್ಕಾರ 20 ನಿಮಿಷ ಕಾಲ ಸಮುದ್ರದಲ್ಲಿ 'ಮುಳುಗು ಸಭೆ' ನಡೆಸಿದ್ದೇ ಇಲ್ಲಿನ ಸ್ವಾರಸ್ಯ. ಅವರ ಉದ್ದೇಶವೂ ಪ್ರಶಂಸಾರ್ಹ.

ಸಮುದ್ರದಡಿ ಮುಳುಗಿದ್ದುಕೊಂಡು ಸಂಪುಟ ಸಭೆ ನಡೆಸಿದ ಸಚಿವರು 'ಇಂಗಾಲ ಮಾಲಿನ್ಯ ತುಂಬಿಸಿ ನಮ್ಮನ್ನು ಮುಳುಗಿಸ ಬೇಡಿ' ಎಂದು ವಿಶ್ವದ ರಾಷ್ಟ್ರಗಳಲ್ಲಿ ಮನವಿ ಮಾಡಿದರು.

ವಿಶ್ವದಲ್ಲಿ ಹಲವು ರೀತಿಯ ಸ್ವಾರಸ್ಯಗಳು ನಡೆಯುತ್ತವೆ. ಅವೆಲ್ಲವೂ ದಾಖಲೆಗಾಗಿ. ಆಗಸದಲ್ಲಿ ಮದುವೆ, ಸಾಗರದಾಳದಲ್ಲಿ ಮಧುಚಂದ್ರ... ಇತ್ಯಾದಿಗಳ ಮೂಲಕ ಅವರದ್ದೆಲ್ಲ ಗಿನ್ನಿಸ್ ದಾಖಲೆ ಸೇರುವ ತಂತ್ರ. ಆದರೆ ಮಾಲ್ದೀವ್ಸ್ ಸರ್ಕಾರ ದಾಖಲೆಗಾಗಿ ಸಮುದ್ರದ ಆಳದಲ್ಲಿ 'ಮುಳುಗು ಸಭೆ' ನಡೆಸಿದ್ದಲ್ಲ. ಪ್ರತಿಪಕ್ಷಗಳು ಮುಳುಗಿಸುವ ಮೊದಲೇ ಸ್ವತಃ ಮುಳುಗಿ ಬಿಡೋಣ ಎಂದೂ ಅಲ್ಲ! ಇದು ಸ್ವಂತ ಜನರ ಉಳಿವಿಗಾಗಿ...

**ನೀರೊಳಗೆ ಸಂಪುಟ ಸಭೆ**

ಮಾಲ್ದೀವ್ಸ್‌ನ ರಾಜಧಾನಿ ಮಾಲೆಯಿಂದ 20 ನಿಮಿಷಗಳ ಸಮುದ್ರಯಾನ ನಡೆಸಿದರೆ ಸಿಗುವ ಗಿರಿಫುಶಿ ದ್ವೀಪದಲ್ಲಿ ಸಮುದ್ರದೊಳಗೆ 6 ಮೀಟರ್ (20 ಅಡಿ) ಆಳದಲ್ಲಿ ಮಂತ್ರಿಮಂಡಲದ ಸಭೆ 20 ನಿಮಷಗಳ ಕಾಲ ನಡೆಯಿತು.

ಅಧ್ಯಕ್ಷ ಮಹಮ್ಮದ್ ನಶೀದ್ ಮತ್ತು ಸಹೋದ್ಯೋಗಿಗಳು ಮುಳುಗುವ ಸಲಕರಣೆ ಧರಿಸಿ, ಆಕ್ಸಿಜನ್ ಸಿಲಿಂಡರ್‌ಗಳನ್ನು ಬೆನ್ನಲ್ಲಿ ಹೊತ್ತು ಕುಳಿತಿದ್ದರು. ಸಮುದ್ರ ತಳದಲ್ಲಿ ಟೇಬಲ್, ಕುರ್ಚಿ ಜೋಡಿಸಲಾಗಿತ್ತು. ಠರಾವು ಮತ್ತು ಅಜೆಂಡಾಗಳನ್ನು ನೀರಲ್ಲಿ ಒದ್ದೆಯಾಗದ ಲೋಹ ಫಲಕ, ಶಾಯಿಗಳಿಂದ ತಯಾರಿಸಲಾಗಿತ್ತು. ಸಭೆ ನಡೆದ ದ್ವೀಪ ಅಲ್ಲಿನ ಮಿಲಿಟರಿ ರಕ್ಷಣಾ ಪ್ರದೇಶವಾಗಿತ್ತು. ಸಂಪುಟ ಸಭೆಯ ಅವಧಿಯಲ್ಲಿ ಅವರೇ ಬಿಗಿ ಭದ್ರತೆ ಒದಗಿಸಿದರು. ಆದರೂ ಮೀನು, ಏಡಿಗಳಂತಹ ಜಲಚರಗಳು ಸಭಾಂಗಣದ ಮಧ್ಯೆ ನುಸುಳಿ ಹೋಗುತ್ತಿದ್ದುವು. ಅದು ಗೋಡೆಗಳು, ಛಾವಣಿ, ಹವಾನಿಯಂತ್ರಕಗಳು ಇಲ್ಲದ ಸಭಾಂಗಣ! ಜಲಚರಗಳು ಮಂತ್ರಿಗಳನ್ನು ಮುಟ್ಟುವ ಗೋಜಿಗೆ ಮಾತ್ರ ಹೋಗಲಿಲ್ಲ. ಅವುಗಳಿಗೂ ಇವರಂತೆಯೇ ಬದುಕುವ ಆಸೆ.

ಸಭೆಗೆ ಮುನ್ನವೇ ಎಲ್ಲರಿಗೂ ಒಂದು ವಾರ ಕಾಲ ಸಮುದ್ರದಲ್ಲಿ ಈಜುವ, ಮುಳುಗುವ ತರಬೇತಿ ನೀಡಲಾಗಿತ್ತು. ನಶೀದ್ ಸ್ವತಃ ಪರವಾನಗಿ ಹೊಂದಿದ ಮುಳುಗು ತಜ್ಞ! ಆದರೆ ಇಬ್ಬರು ಸಚಿವರಿಗೆ ನೀರಲ್ಲಿ ಇಳಿಯಲು ವೈದ್ಯರು ಅನುಮತಿ ಕೊಡಲಿಲ್ಲವಂತೆ! ಇನ್ನೊಬ್ಬರು ವಿದೇಶ ಪ್ರವಾಸದಲ್ಲಿದ್ದು ಸಭೆಗೆ ಗೈರು!

**ನೀರಲ್ಲೇ ಯಾಕೆ?**

ವಿಶ್ವದ ಪ್ರಬಲ ರಾಷ್ಟ್ರಗಳು ನಿಯಂತ್ರಣವಿಲ್ಲದೆ ಆಕಾಶಕ್ಕೆ ಕಾರ್ಬನ್ ತುಂಬಿಸುತ್ತಿವೆ. ಇದರಿಂದ ಮಾಲಿನ್ಯ ಹೆಚ್ಚಿ, ಭೂಮಂಡಲದ ಉಷ್ಣತೆಯೂ ಹೆಚ್ಚುತ್ತದೆ. ಸಮುದ್ರವೂ ಉಕ್ಕೇರುತ್ತದೆ. ಹಾಗಾದಲ್ಲಿ ತಗ್ಗಿನಲ್ಲಿರುವ 1200 ದ್ವೀಪಗಳಲ್ಲೊಂದಾದ ಮಾಲ್ದೀವ್ಸ್ ತನ್ನ ಮೂರೂವರೆ ಲಕ್ಷ ಜನತೆಯೊಂದಿಗೆ ಮುಳುಗಿ ನಾಶವಾಗುತ್ತದೆ– ಇದು ಸರ್ಕಾರದ ಚಿಂತೆ.

ಮಾಲ್ದೀವ್ಸ್ ಸಮುದ್ರಮಟ್ಟದಿಂದ ಒಂದು ಮೀಟರ್ ಎತ್ತರದಲ್ಲಿದೆ. ಕೇವಲ 15ರಿಂದ 60 ಅಡಿ ನೀರು ಏರಿದರೆ ದ್ವೀಪ ಮುಳುಗಡೆಯಾಗುತ್ತದೆ. ಭೂತಾಪಮಾನ ಇದೇ ರೀತಿ ಏರುತ್ತಿದ್ದರೆ ಇನ್ನು 90 ವರ್ಷಗಳಲ್ಲಿ ದ್ವೀಪ ಜಲ ಸಮಾಧಿಯಾಗಬಹುದು ಎನ್ನುವ ಭಯ ಅವರದ್ದು. ಇದು ಅಧ್ಯಯನ ವರದಿಯೂ ಹೌದು. ಅಂತರರಾಷ್ಟ್ರೀಯ ಭೂಗರ್ಭ ಸಹ ಕಾರ್ಯಕ್ರಮ (ಐಜಿಸಿಪಿ) ಹೀಗೆಂದು ವರದಿ ನೀಡಿದೆ.

ನಶೀದ್ ಅವರು ಚುನಾವಣೆಯ ಸಂದರ್ಭದಲ್ಲಿ ಪ್ರವಾಸೋದ್ಯಮದಿಂದ ಲಭಿಸುವ ಲಕ್ಷಾಂತರ ಡಾಲರ್ ಬಳಸಿ ಇಡೀ ದೇಶವನ್ನು ಸ್ಥಳಾಂತರಿಸುವ ಭರವಸೆ ನೀಡಿದ್ದರು. 2020ರ ವೇಳೆಗೆ ದೇಶದಲ್ಲಿ ಡೀಸೆಲ್, ಕಲ್ಲಿದ್ದಲು ಬಳಕೆಯನ್ನು ನಿಷೇಧಿಸುವ ನಿರ್ಧಾರವನ್ನೂ ತಳೆದಿದ್ದರು.

ಈ ಬಗ್ಗೆ ಗಮನ ಸೆಳೆಯಲೆಂದೇ ನೀರೊಳಗಿರ್ದು ಸಚಿವ ಸಂಪುಟ ಸಭೆ ನಡೆಯಿತು. ಅಧ್ಯಕ್ಷ ಮಹಮ್ಮದ್ ನಶೀದ್ ಹಾಗೂ ಸಂಪುಟ ಸದಸ್ಯರು ಕಾರ್ಬನ್ ಮಾಲಿನ್ಯ ನಿಯಂತ್ರಿಸುವಂತೆ ಜಗತ್ತಿನ ದೇಶಗಳನ್ನು ಒತ್ತಾಯಿಸುವ ಠರಾವನ್ನು ಅಂಗೀಕರಿಸಿದರು. ಈ ಠರಾವನ್ನು ವಿಶ್ವಸಂಸ್ಥೆಗೆ ರವಾನಿಸುವುದು; ಡಿಸೆಂಬರ್‌ನಲ್ಲಿ ನಡೆಯುವ 'ಆಶಿಯಾನ್' ಶೃಂಗ ಸಭೆಯಲ್ಲಿ ಈ ಠರಾವನ್ನು ಮಂಡಿಸಿ ಜಗತ್ತಿನ ಗಮನ ಸೆಳೆಯುವುದು ಮಾಲ್ದೀವ್ಸ್ ಸರ್ಕಾರದ ಉದ್ದೇಶವಂತೆ.